# ಅನಗತ್ಯ ಕೂದಲ ನಿವಾರಣೆಗೆ ಐಪಿಎಲ್



ಉಮಾ ಜಯಕುಮಾರ್
ಬ್ಯೂಟಿಶಿಯನ್

ಐಪಿಎಲ್ ಎಂದಾಕ್ಷಣ ನಮಗೆಲ್ಲರಿಗೂ ನೆನಪಾಗುವುದು 'ಇಂಡಿಯನ್ ಪ್ರೀಮಿಯರ್ ಲೀಗ್' ಕ್ರಿಕೆಟ್ ಮ್ಯಾಚ್‌ಗಳು. ಆದರೆ ಇಲ್ಲಿ ಐಪಿಎಲ್ ಎಂದರೆ 'ಇಂಟೆನ್ಸ್ ಪಲ್ಸ್ ಲೈಟ್' ಹಾರ್ಮೋನಿನ ಏರುಪೇರುಗಳಿಂದ ಮತ್ತು ಸ್ಟಿರಾಯ್ಡ್‌ಗಳ ಅತ್ಯಧಿಕ ಬಳಕೆಯಿಂದ ಹೆಂಗಸರಲ್ಲಿ ಬೆಳೆಯುವ ಅನಗತ್ಯ ರೋಮಗಳನ್ನು ತೆಗೆಯಲು ಬಳಸುವ ಯಂತ್ರವಿದು.

ನೋಡಲು ಮುದ್ದಾಗಿದ್ದರೂ ಕೆಲವರಲ್ಲಿ ಮುಖ, ಕೈಕಾಲು, ಸೊಂಟ ಇತರೆ ಸ್ಥಳಗಳಲ್ಲಿ ಅನಗತ್ಯವಾದ ರೋಮಗಳು ಕಾಣಿಸಿಕೊಳ್ಳುತ್ತವೆ. ಇದರಿಂದ ಅವರು ಮಾನಸಿಕ ಒತ್ತಡಕ್ಕೆ ಸಿಲುಕುತ್ತಾರೆ. ತಲೆ, ಕೂದಲುಗಳಿಗೆ ಸಾಕಷ್ಟು ಪ್ರಾಮುಖ್ಯತೆ ಕೊಡುವ ನಾವುಗಳು ಈ ಅನಗತ್ಯವಾಗಿ ಬೆಳೆಯುವ ರೋಮಗಳಿಗೆ ತಲೆ ಕೆಡಿಸಿಕೊಳ್ಳುವುದು ಸಹಜವೇ ಸರಿ. ಇದರ ನಿವಾರಣೆಗೆ ಸಾಕಷ್ಟು ಯಂತ್ರೋಪಕರಣಗಳಿದ್ದರೂ ಐಪಿಎಲ್ ಒಂದು ಉತ್ತಮ ಫಲಿತಾಂಶವನ್ನು ನೀಡುವ ಯಂತ್ರ ಎಂದರೆ ತಪ್ಪಾಗಲಾರದು. ಇದರಿಂದ ಯಾವುದೇ ರೀತಿಯಾದ ಹಾನಿಕರ ಇಲ್ಲದಿರುವುದು ಇದರ ಪ್ರಮುಖ ಅಂಶಗಳಲ್ಲೊಂದು. ಪಾಶ್ಚಿಮಾತ್ಯ ದೇಶಗಳಲ್ಲಿ ಮಾತ್ರ ಬಳಕೆಯಾಗಿದ್ದ ಈ ಐಪಿಎಲ್ ಯಂತ್ರವು ಈಗ ಭಾರತದಲ್ಲಿ ಅತೀ ಹೆಚ್ಚು ಬಕೆಯಾಗುತ್ತಿದೆ. ಇದಕ್ಕೆ ಕಾರಣ ಕಡಿಮೆ ವೇಳೆಯಲ್ಲಿ ಕಡಿಮೆ ವೆಚ್ಚದಲ್ಲಿ ಸಿಗುವ ಹೆಚ್ಚಿನ ಫಲ. ಅನಗತ್ಯ ಕೂದಲು ಬೆಳೆಯುವಿಕೆಗೆ ಕಾರಣಗಳು ಹಲವಾರಿದ್ದರೂ ಮುಖ್ಯವಾಗಿ ಅದರಲ್ಲೂ ಯುವತಿಯರಲ್ಲಿ ಉಂಟಾಗುವ ಹಾರ್ಮೋನಿನ ಏರುಪೇರು. ಸ್ಟಿರಾಯ್ಡ್‌ಗಳ ಅತ್ಯಧಿಕ ಬಳಕೆ. ಗರ್ಭನಿರೋಧಕ ಗುಳಿಗೆಗಳು. ಋತುಚಕ್ರ ಮುಂದೂಡುವ ಗುಳಿಗೆಗಳು ಇವೇ ಮೊದಲಾಗಿವೆ. ಇಷ್ಟು ದಿನಗಳು ಇವುಗಳ ನಿವಾರಣೆಗಾಗಿ ಹೆಣ್ಣುಮಕ್ಕಳು ಸೌಂದರ್ಯ ತಜ್ಞರ ಮತ್ತು ಚರ್ಮರೋಗ ವೈದ್ಯರ ಮೊರೆ ಹೋದದ್ದು ನಿಜವೇ. ವ್ಯಾಕ್ಸಿಂಗ್ ಮತ್ತು ಥ್ರೆಡ್ಡಿಂಗ್ ಇವುಗಳಿಂದ ತೃಪ್ತರಾಗದವರು ಸಾಕಷ್ಟು ಅತ್ಯಾಧುನಿಕ ಎನಿಸಿಕೊಂಡ 'ಲೇಸರ್'ಯಂತ್ರಗಳ ಮೊರೆ ಹೋದದ್ದು ನಿಜವೇ. ಆದರೆ ಈ ಲೇಜರ್ ಉಪಯೋಗ ಕೇವಲ ಶ್ರೀಮಂತರಿಗೆ ಮಾತ್ರ ಮೀಸಲಾಗಿದ್ದು ಬಡ ಬಗ್ಗರಿಗೆ ಮತ್ತು ಮಧ್ಯಮವರ್ಗದವರಿಗೆ ಲಭ್ಯವಾಗುತ್ತಿರಲಿಲ್ಲ. ಇಂಥ ಸಂದರ್ಭದಲ್ಲಿ ಮಾರುಕಟ್ಟೆಗೆ ಬಂದ ಐಪಿಎಲ್ ಯಂತ್ರವು ಫಲಪ್ರದವಾಯಿತೆಂದರೆ ತಪ್ಪಾಗಲಾರದು. ಇದರಿಂದ ಬಡವರೂ, ಮಧ್ಯಮವರ್ಗದವರೂ ಈ ಅನಗತ್ಯ ರೋಮಗಳಿಂದ ಮುಕ್ತರಾಗುವಂತೆ ಮಾಡಿದೆ. ಈ ಐಪಿಎಲ್ ಯಂತ್ರವು ಬರೀ ಅನಗತ್ಯ ರೋಮಗಳಿಂದಾಗಿ ಅಲ್ಲದೆ ಬೇರೆ ತೊಂದರೆಗಳನ್ನು ನಿವಾರಣೆ ಮಾಡಲೂ ಉಪಯೋಗಿಸಲಾಗುತ್ತದೆ. ಉದಾಹರಣೆಗೆ ವಯಸ್ಸಿನ ಪ್ರಭಾವದಿಂದಾಗುವ ಚರ್ಮದ ಸುಕ್ಕು, ಯುವಕ ಮತ್ತು ಯುವತಿಯರಲ್ಲಿ ಕಾಣಿಸಿಕೊಳ್ಳುವ ಮೊಡವುಗಳು, ಮೊಡವೆಗಳಿಂದಾಗುವ ಕಪ್ಪು ಚುಕ್ಕೆಗಳು ಇವೇ ಮೊದಲಾದವು. ಒಂದು ಕಾಲದಲ್ಲಿ ಕೇವಲ ವೈದ್ಯರುಗಳ ಬಳಿಯಲ್ಲಿ ಮಾತ್ರ ಇರುತ್ತಿದ್ದ ಈ ಐಪಿಎಲ್ ಯಂತ್ರವು ಈಗ ಬ್ಯೂಟಿ ಪಾರ್ಲರ್‌ಗಳಿಗೂ ಲಗ್ಗೆ ಇಟ್ಟಿದ್ದು ಮಧ್ಯಮ ವರ್ಗದವರಿಗೂ ಬಡವರಿಗೂ ಸಂತಸದ ಸಂಗತಿ. 'ಲೈಟ್ ಟೆಕ್ನಾಲಜಿ'ಯನ್ನು ಉಪಯೋಗಿಸಿಕೊಂಡು ತಯಾರಿಸಲ್ಪಟ್ಟ ಈ ಉಪಕರಣವು 420–ಎಂಎಂ ನಿಂದ 1,200–ಎಂ.ಎಂ. ವೇವ್‌ಲೆಂತ್ ಹೊಂದಿದೆ. ಈ ಯಂತ್ರವನ್ನು ಭಾರತದಲ್ಲಿ ಮೊದಲ ಬಾರಿಗೆ ತಯಾರಿಸಿದ್ದು ಬೆಂಗಳೂರಿನ ವಿ–ಕೇರ್ ಮೆಡಿಕಲ್ ಸಿಸ್ಟಮ್ಸ್. ಈ ಐಪಿಎಲ್ ಯಂತ್ರ ನಾಲ್ಕು ಬೇರೆ ಬೇರೆ ವೇವ್‌ಲೆಂತ್ ಹೊಂದಿರುವ ಫಿಲ್ಟರ್‌ಗಳನ್ನು ಹೊಂದಿದೆ. ಇದರಿಂದ ಅನಗತ್ಯ ರೋಮ, ಮೊಡವೆ, ಸುಕ್ಕು ನಿವಾರಣೆ, ಕಪ್ಪು ಕಲೆ ಇವೇ ಮೊದಲಾದವುಗಳನ್ನು ಕಡಿಮೆ ವೆಚ್ಚದಲ್ಲಿ, ಕಡಿಮೆ ವೇಳೆಯಲ್ಲಿ ನಿವಾರಣೆ ಮಾಡಬಹುದು. ಲೇಸರ್ ಚಿಕಿತ್ಸೆಗೆ ಭಯಪಡುವವರಿಗೆ ಈ ಐಪಿಎಲ್ ವರದಾನ. ಇದು ಬರೀ ಬಿಳಿ ಚರ್ಮದವರಷ್ಟೇ ಅಲ್ಲದೆ ಕಪ್ಪು, ಸಾದಗಪ್ಪು ವರ್ಣದವರೂ ಉಪಯೋಗಿಸಬಹುದಾಗಿದೆ. ಉತ್ತಮ ಫಲಿತಾಂಶಕ್ಕಾಗಿ ಕನಿಷ್ಟಪಕ್ಷ ಹತ್ತರಿಂದ ಹನ್ನೆರಡು ಸಿಟಿಂಗ್ಸ್ ಚಿಕಿತ್ಸೆ ಪಡೆದುಕೊಳ್ಳಬಹುದು. ನಂತರವೂ ಸರಿಯಾಗದಿದ್ದ ಪಕ್ಷದಲ್ಲಿ ಕಾರಣ ಪತ್ತೆ ಹಚ್ಚಿ ಚಿಕಿತ್ಸೆ ಮುಂದುವರಿಸಬಹುದು. ಗರ್ಭಿಣಿಯರು, ಮಕ್ಕಳಿಗೆ ಳೂ ಈ ಚಿಕಿತ್ಸೆ



ಕೆಲವರಿಗೆ ಕೆಲವೇ ಸಿಟ್ಟಿಂಗ್ಸ್‌ಗಳಲ್ಲಿ ಉತ್ತಮ ಫಲಿತಾಂಶ ದೊರೆತಿದೆ. ಕೆಲವರಿಗೆ ಸ್ವಲ್ಪ ತಡವಾಗಬಹುದು. ಇದರಿಂದ ನಿರಾಸೆ ಹೊಂದದೆ ಸ್ವಲ್ಪ ಸಹನೆಯಿಂದ ಸಹಕರಿಸಿದರೆ ಉತ್ತಮ ಫಲಿತಾಂಶಗಳನ್ನು ಪಡೆಯಬಹುದು. ಸುಮಾರು ಎರಡರಿಂದ ಮೂರು ವರ್ಷಗಳವರೆಗೆ ಈ ಅನಗತ್ಯ ರೋಮಗಳಿಂದ ಮುಕ್ತಿ ಹೊಂದಬಹುದು. ಆ ನಂತರ ಮತ್ತೆ ಈ ರೋಮಗಳು ಕಾಣಿಸಿಕೊಂಡಲ್ಲಿ ಮತ್ತೆ ಒಂದೆರಡು ಸಿಟ್ಟಿಂಗ್ಸ್ ಚಿಕಿತ್ಸೆಯನ್ನು ತೆಗೆದುಕೊಂಡರೆ ಅನಗತ್ಯ ರೋಮಗಳ ಕಾಟದಿಂದ ಮುಕ್ತರಾಗಬಹುದು.